# ಆಧ್ಯಾತ್ಮಿಕ ಕವನಗಳು

॥ ೧ ॥

## ॥ ಎಲ್ಲಿ, ಎಲ್ಲಿ, ಎಲ್ಲಿ ॥

ಪ್ರೇಮವೆಂಬುದು ಎಲ್ಲಿ, ಕಾಮದ ಛಾಯೆಯಲ್ಲಿ ।
ಕಾಮವೆಂಬುದು ಎಲ್ಲಿ, ಭಾವದ ಬಯಲಿನಲ್ಲಿ ॥

ಭಾವವೆಂಬುದು ಎಲ್ಲಿ, ಮನದಾಂತರಾಳದಲ್ಲಿ ।
ಮನಸಿನ ಇರವು ಎಲ್ಲಿ, ಬುದ್ಧಿಯ ಬೀಜದಲ್ಲಿ ॥೧॥

ಬುದ್ಧಿಯೆಂಬುದು ಎಲ್ಲಿ, ಅಹಮಿನ ಮರ್ಮದಲ್ಲಿ ।
ಅಹಮಿನ ಉಳಿವು ಎಲ್ಲಿ, ಮಾಯೆಯ ಸೆಳವಿನಲ್ಲಿ ॥೨॥

ಮಾಯೆಯೆಂಬುದು ಎಲ್ಲಿ, ಬ್ರಹ್ಮದ ಲೀಲೆಯಲ್ಲಿ ।
ಬ್ರಹ್ಮವೆಂಬುದು ಎಲ್ಲಿ, ಇಲ್ಲಿ ಮತ್ತು ಅಲ್ಲಿ ॥೩॥

॥ ೨ ॥

## ॥ ತಾನು, ತಾನು, ತಾನು ॥

ಜಾಗ್ರತ್ತಿನಲ್ಲಿ ಜೀವಾತ್ಮನೇ ತಾನು ।
ವಾಸ್ತವ್ಯದಲ್ಲಿ ಭೂತಾತ್ಮನೇ ತಾನು ।
ಸೌಷುಪ್ತಿಯಲ್ಲಿ ಪರಮಾತ್ಮನೇ ತಾನು ॥

ಸಿಂಧುವಿನ ಒಳಗೆ ಹನಿಬಿಂದುಗಳು ತಾನು ।
ಬಿಂದುಗಳು ಸೇರಿರುವ ಸಿಂಧುವೇ ತಾನು ।
ಕಣಗಳೊಳಗಿನ ಮೂಲಗುಣಗಳೇ ತಾನು ।
ಗುಣಗಳೊಂದಿಗೆ ಭೌತಕಣಗಳೇ ತಾನು ॥೧॥

ನಾನೆಂಬ ಅಹಮಿಕೆಯ ಮೂಲವೇ ತಾನು ।
ನೀನೆಂಬ ಭೇದಗಳ ಬಿಂಬವೇ ತಾನು ।
ದೇಶವನು ತಿರುಗಿಸುವ ಕಾಲವೇ ತಾನು ।
ಕಾಲವನು ಪ್ರಕಟಿಸುವ ದೇಶವೇ ತಾನು ॥೨॥

ದೇಹವನು ವ್ಯಾಪಿಸಿಹ ಜೀವವೇ ತಾನು ।
ಜೀವವನು ಬೆಳಗಿಸಿಹ ದೇಹವೇ ತಾನು ।
ಮೋಕ್ಷವನು ಬಯಸುತಿಹ ಬಂಧವೇ ತಾನು ।
ಬಂಧವನು ಕಳಚುತಿಹ ಮೋಕ್ಷವೇ ತಾನು ॥೩॥

|| ೩ ||

## || ಮರ್ಮ, ಧರ್ಮ, ಕರ್ಮ ||

ಸಾವು–ನೋವುಗಳ ಮರ್ಮವದೇನು ।
ಜೀವ–ದೈವಗಳ ದ್ವಂದ್ವವದೇನು ॥

ಸ್ಥಾವರ ಜೀವಕೆ ನೋವೆಂಬುದಿಲ್ಲ ।
ಜಂಗಮ ಜೀವಕೆ ನೋವಿಲ್ಲದಿಲ್ಲ ।
ಸಾವಿಲ್ಲದಿರೆ ವಿಕಾಸವಿಲ್ಲ ।
ನೋವಿಲ್ಲದಿರೆ ವಿಚಾರವಿಲ್ಲ ॥೧॥

ಜೀವವ ಸೃಜಿಪುದು ದೈವದ ಧರ್ಮ ।
ಮಾಯೆಯಲಿಡುವುದು ದೈವದ ಕರ್ಮ ।
ಹುಟ್ಟ ಪಡೆಯುವುದು ಜೀವದ ಧರ್ಮ ।
ಸಾವ ಮರೆಯುವುದು ಜೀವದ ಕರ್ಮ ॥೨॥

ದೈವವು ತಾನಾಗಿ ಜನ್ಮಿಸಿತಲ್ಲ ।
ಜೀವವ ಮಾಯೆಯೊಳ್ಬಂಧಿಸಿತಲ್ಲ ।
ಬಾಂಧವ್ಯವೆಂಬುದು ದೈವದ ಮಾಯೆ ।
ವ್ಯಾಮೋಹವೆಂಬುದು ಜೀವದ ಮಾಯೆ ॥೩॥

॥ ೪ ॥

## ॥ ಬಿಂದು – ಸಿಂಧು ॥

ಹನಿಯು ಉಲಿಯಿತು ಜಲಕೆ – ನಾನು ನಾನೆ, ನೀನು ನೀನೆ ।
ಜಲವು ನುಡಿಯಿತು ಹನಿಗೆ – ನೀನು ನಾನೆ, ನಾನು ನೀನೆ ॥

ಹನಿಯು ಉಲಿಯಿತು ಜಲಕೆ – ನಾನು ಬಿಂದು, ನೀನು ಸಿಂಧು ।
ಜಲವು ನುಡಿಯಿತು ಹನಿಗೆ – ಬಿಂದು ಸಿಂಧು ಎರಡು ಒಂದು ॥೧॥

ಹನಿಯು ಉಲಿಯಿತು ಜಲಕೆ – ನಾನು ಬೇರೆ, ನೀನು ಬೇರೆ ।
ಜಲವು ನುಡಿಯಿತು ಹನಿಗೆ – ನಾನು ನಿನ್ನಯ ಅಮೃತಧಾರೆ ॥೨॥

ಹನಿಯು ಉಲಿಯಿತು ಜಲಕೆ – ನಾನು ಬಡವ, ನೀನು ಒಡೆಯ ।
ಜಲವು ನುಡಿಯಿತು ಹನಿಗೆ – ಬಡವನ ಒಳಗೆ ಒಡೆಯನು ಇರುವ ॥೩॥

ಹನಿಯು ಉಲಿಯಿತು ಜಲಕೆ – ನಾನು ಬದ್ಧ, ನೀನು ಶುದ್ಧ ।
ಜಲವು ನುಡಿಯಿತು ಹನಿಗೆ – ನನ್ನನು ಅರಿತರೆ ನೀನು ಸಿದ್ಧ ॥೪॥

॥ ೫ ॥

## ॥ ಬ್ರಹ್ಮರ್ಷಿ – ಮಹರ್ಷಿ – ಪರಮರ್ಷಿ ॥

ದತ್ತನ ಚಿತ್ತದಿ ಮಸ್ತಕವಿರಿಸುತ ತಿಳಿಯುವೆ ಈ ನಿಜತತ್ತ್ವಗಳ ।
ಗುರುದತ್ತನ ಚರಣಕೆ ಭಕ್ತಿಯೊಳ್ನಮಿಸುತ ಬಿತ್ತುವೆ ಈ ನುಡಿಮುತ್ತುಗಳ ॥

ವೇದದಿ ಬ್ರಹ್ಮ ಪುರಾಣದಿ ವಿಷ್ಣುವು ತಂತ್ರದಿ ಶಿವ ಎಂದುಚ್ಚರಿಸಿ ।
ವಿಶ್ವವ ನಡೆಸಿಹ ನಿಶ್ಚಲ ತತ್ತ್ವವ ನಾನಾ ನಾಮದಿ ಸಿಂಗರಿಸಿ ।
ಏಕತೆಯೊಳಗೆ ಅನೇಕತತ್ತ್ವಗಳ ಗೋಚರಗಳನು ಸಮೀಕರಿಸಿ ॥೧॥

ಬ್ರಹ್ಮಸೂತ್ರಗಳ ಪೋಣಿಸಿ ಬರೆದಿಹ ವ್ಯಾಸಗೆ ಧರೆಯೊಳು ಮಿಗಿಲುಂಟೆ ।
ಯೋಗಸೂತ್ರಗಳ ರಚಿಸಿ ಪತಂಜಲಿ ತೋರಿಹುದನು ಮರೆಯುವುದುಂಟೆ ।
ಆತ್ಮದ ಸತ್ಯವ ಸ್ತೋತ್ರದಿ ನುಡಿದಿಹ ಆದಿಶಂಕರಗೆ ಸಮರುಂಟೆ ॥೨॥

ವ್ಯಾಸೋಚ್ಛಿಷ್ಟವು ಜಗತ್ತು ಸರ್ವವು ಎನ್ನುವ ಮಾತನು ಗೌರವಿಸಿ ।
ಯೋಗವು ಚಿತ್ತದ ವೃತ್ತಿನಿರೋಧವು ಈ ವಚನವ ಅನುದಿನ ಸ್ಮರಿಸಿ ।
ಬ್ರಹ್ಮವು ಸತ್ಯವು ಜಗತ್ತು ಮಿಥ್ಯೆಯು ಎಂಬ ನುಡಿಯ ಶಿರಸಾ ಧರಿಸಿ ॥೩॥

ಲೋಕದ ಉನ್ನತ ತತ್ತ್ವಜ್ಞಾನಿಯು ವ್ಯಾಸನೊಬ್ಬನೇ ಬ್ರಹ್ಮ ಋಷಿ ।
ಚಿತ್ತದ ಗುಟ್ಟನು ಲೋಕಕೆ ತೋರಿ ಪತಂಜಲಿಯಾಗಿಹ ಮಹಾ ಋಷಿ ।
ಗುರುವು ಜಗತ್ತಿಗೆ ಶಂಕರನೊಬ್ಬನೆ ಋಷಿಗಳಿಗಾಗಿಹ ಪರಮ ಋಷಿ ॥೪॥

॥ ೬ ॥

## ॥ ದೈವದ ಇರವ ಪ್ರಶ್ನಿಸುವೆಯೇನು ॥

ದೈವದ ಇರವ ಪ್ರಶ್ನಿಸುವೆಯೇನು ।
ಜೀವನದರ್ಥವು ತಿಳಿದಿಹುದೇನು ॥

ಚಿಟ್ಟೆಯು ಎಲೆಯಡಿ ಮೊಟ್ಟೆಯನಿಟ್ಟಿತು ।
ಮೊಟ್ಟೆಯೊಡೆದ ಹುಳು ಕೋಶವ ಕಟ್ಟಿತು ।
ಕೋಶವನೊಡೆದೀ ಚಿಟ್ಟೆಯು ಹಾರಿತು ।
ಹೂವು-ಹೂವುಗಳ ಮಧುವನು ಹೀರಿತು ॥
ಚಿಟ್ಟೆಗೆ ಪ್ರಾಣವ ಕೊಟ್ಟಿಹುದಾರು ।
ಹೂವಲಿ ಮಧುವನು ತುಂಬಿಹುದಾರು ॥೧॥

ಗಂಡು-ಹೆಣ್ಣುಗಳ ದೈಹಿಕ ಸಂಭ್ರಮ ।
ಗರ್ಭದಿ ಅಂಡ-ರೇತಗಳ ಸಂಗಮ ।
ಅಣುಗಳು ಶರೀರವಾಗುವ ವಿಭ್ರಮ ।
ನವಮಾಸ ಕಳೆದು ಶಿಶುವಿನ ಆಗಮ ॥
ದೇಹದಿ ಕಾಮವ ತುಂಬಿಹುದಾರು ।
ಗರ್ಭಕೋಶವನು ರಚಿಸಿಹುದಾರು ॥೨॥

ರವಿಯ ಸುತ್ತ ಗ್ರಹಗಳ ಪರಿಭ್ರಮಣ ।
ಭುವಿಯ ಸುತ್ತ ಚಂದ್ರನ ಅತಿಭ್ರಮಣ ।
ಗಗನದ ಎಲ್ಲೆಡೆಯೂ ಅನುಕ್ರಮಣ ।
ಮೇಲು-ಕೆಳಗಿಲ್ಲದಿಹ ಸಂಕ್ರಮಣ ॥
ಗ್ರಹ-ತಾರೆಗಳನು ರಚಿಸಿಹುದಾರು ।
ಅಂತ್ಯವಿಲ್ಲದಿಹ ವಿಶ್ವವಿದಾರು ॥೩॥

॥ ೭ ॥

## ॥ ನಾನು – ಇವಳು ॥

ನಾನು ಕರೆದರೆ ಇವಳು ಬಾರಳು ।
ನಾನು ಕರಗದೆ ಇವಳು ಏರಳು ॥

ಇವಳು ಕೆಳಗಿರೆ ನಾನು ಮೇಲಿಹೆ ।
ಇವಳು ಮಲಗಿರೆ ನಾನು ಎದ್ದಿಹೆ ॥೧॥

ಇವಳ ಹರಿವನು ನಾನು ನಿಲಿಸುವೆ ।
ಇವಳ ಮೌನದಿ ನಾನು ಬದುಕುವೆ ॥೨॥

ಇವಳು ಎದ್ದರೆ ನಾನು ಮಲಗುವೆ ।
ಇವಳು ಮೇಲ್ಬರೆ ನಾನು ಸಾಯುವೆ ॥೩॥

॥ ೮ ॥

## ॥ ಯಾವುದು ಮೊದಲು ॥

ಯಾವುದು ಯಾವುದಕಿಂತಲು ಮೊದಲು? ॥

ಮೊಟ್ಟೆಯು ಮೊದಲೋ, ಕೋಳಿಯು ಮೊದಲೋ?
ಮೊಟ್ಟೆಯಿಂದಲೇ ಚಿಟ್ಟೆಯು ಹುಟ್ಟಿಲ್ಲವೇನು? ॥೧॥

ಬೀಜವು ಮೊದಲೋ, ವೃಕ್ಷವು ಮೊದಲೋ?
ಬೀಜದಿಂದಲೇ ಹುಲ್ಲದು ಬೆಳೆದಿಲ್ಲವೇನು? ॥೨॥

ಬ್ರಹ್ಮವು ಮೊದಲೋ, ಜೀವವು ಮೊದಲೋ?
ಬ್ರಹ್ಮದಿಂದಲೇ ಜಗತ್ತು ಜನಿಸಿಲ್ಲವೇನು? ॥೩॥

ಅರ್ಥವು ಮೊದಲೋ, ಮಾತದು ಮೊದಲೋ?
ಮಾತಿಲ್ಲದೆಯೆ ಪ್ರಾಣಿಯು ಅರ್ಥೈಸದೇನು? ॥೪॥

॥ ೮ ॥

## ॥ ಅವರ ಇವರ ಆಸೆ ॥

ಅವರಿಗೆ ಇವರ ಹಾಗೆ ಆಗುವ ಆಸೆ ।
ಇವರಿಗೆ ಅವರ ಹಾಗೆ ಆಗುವ ಆಸೆ ॥

ಹಳ್ಳಿಯವರಿಗೆ ವೈಭವ ಕಂಡು ನಗರದಲ್ಲಿಯೇ ಬದುಕುವ ಆಸೆ ।
ನಗರದವರಿಗೆ ಶಾಂತಿಯನರಸಿ ಹಳ್ಳಿಗೆ ಹೋಗಿ ನೆಲೆಸುವ ಆಸೆ ॥೧॥

ಮದುವೆಯಾಗದವ ಜೋಡಿಯ ಕಂಡು ವಿವಾಹವಾಗಿ ಜೀವಿಸುವಾಸೆ ।
ಮದುವೆಯಾದವಗೆ ಒಂಟಿಯ ಕಂಡು ಸ್ವಚ್ಛಂದದಲಿ ಬದುಕುವ ಆಸೆ ॥೨॥

ವಿಧವಿಧವಾದ ಭಕ್ಷ್ಯದ ಹೆಸರನು ಆರಿಸಿ ತರಿಸಿ ತಿನ್ನುವ ಆಸೆ ।
ತಿನ್ನುತ ಇತರರ ತಟ್ಟೆಯ ನೋಡಿ ಆ ಭಕ್ಷ್ಯವನೇ ತರಿಸುವ ಆಸೆ ॥೩॥

ಕೂದಲಿರುವಾಗ ವಿಧ-ವಿಧವಾಗಿ ಅದನು ಕತ್ತರಿಸಿ ಮೆರೆಯುವ ಆಸೆ ।
ಕೂದಲಿಲ್ಲದವ ಎಣ್ಣೆಯನುಜ್ಜಿ ಔಷಧ ಸೇವಿಸಿ ಬೆಳೆಸುವ ಆಸೆ ॥೪॥

ಬಡವಗೆ ಬದುಕಲಿ ಕಾಸನು ಗಳಿಸಿ ಸಿರಿ-ವೈಭವದಲಿ ಮೆರೆಯುವ ಆಸೆ ।
ಕಾಸು ಇದ್ದವಗೆ ಗೊಡವೆಯ ತೊರೆದು ಸನ್ಯಾಸಾಶ್ರಮ ಸೇರುವ ಆಸೆ ॥೫॥

॥ ೧೦ ॥

## ॥ ಇವರು ಸೃಜಿಸಿರುವ ಮಾಯೆ ॥

ದೈವದ ಮಾಯೆಯು ಸಾಲದು ಎಂದು, ಇವರು ಸೃಜಿಸಿಹರು ತಮ್ಮದೆ ಒಂದು ॥

ಗಂಡು–ಹೆಣ್ಣುಗಳು ಕಾಮದಿ ಕೂಡಿ, ಫಲದಿಂ ಜನಿಸಿದ ಮಕ್ಕಳ ನೋಡಿ ।
ಸಂಬಂಧದ ಹಣೆಪಟ್ಟಿಯ ಕಟ್ಟಿ, ಒಳಗಿನ ನುಡಿಯನು ಮೋಹದಿ ಮೆಟ್ಟಿ ॥೧॥

ಇವನು ತಂದೆ ತಾಯಿಯು ನಿನಗಿವಳು, ಅವರಿಹರು ನಿನಗೆ ಅಜ್ಜಿ–ತಾತರು ।
ಅವನು ಅಣ್ಣ ತಂಗಿಯು ನಿನಗವಳು, ಅವರು ಮಾವ–ಅತ್ತೆಯರು ನೋಡು॥೨॥

ಇವರ ಜೊತೆಗೆ ನೀ ಹೀಗಿರಬೇಕು, ಅವರ ಎದುರು ನೀ ಹಾಗಿರಬೇಕು ।
ಎಲ್ಲರ ಮುಂದೆ ನಟಿಸಲುಬೇಕು, ನಿನ್ನತನವ ನೀ ಮರೆತಿರಬೇಕು ॥೩॥

ಬೆಳೆದ ಮೇಲೆ ನೀ ಗಳಿಸಲೆಬೇಕು, ಹಣ–ವಾಹನ–ಮನೆ–ಹೆಸರು–ಗೌರವ ।
ಬದುಕಿನ ಗುರಿಗಳ ಮುಟ್ಟಲೆಬೇಕು, ಇಲ್ಲದಿರೆ ನಮ್ಮ ಘನತೆಗಭಾವ ॥೪॥

ದೇವರ–ದಿಂಡರ ಪೂಜೆಯ ಮಾಡು, ನಿತ್ಯವು ಅವರಲಿ ಭಿಕ್ಷೆಯ ಬೇಡು ।
ಧನವಂತರ ಸಂಬಂಧವ ನೋಡು, ಅಂತಹ ಗೆಳೆಯರ ಸಂಗವ ಮಾಡು ॥೫॥

ಸಣ್ಣ ಕುಟುಂಬವು ದೊಡ್ಡದಾಗಲು, ಸಣ್ಣ ಮನೆ ಕೆಡವಿ ಹಿರಿದನು ಕಟ್ಟಿ ।
ಬಂಧು–ಬಳಗವನು ದಿನ–ದಿನ ನೆನೆದು, ಎಲ್ಲರ ಜೊತೆಗಿರೆ ಸಂಭ್ರಮ ಹುಟ್ಟಿ ॥೬॥

ಹೀಗೆಯೆ ವಿಧ–ವಿಧ ಭೇದವ ಮಾಡಿ, ಜಾತಿ–ಮತಗಳನು ಮಧ್ಯದಿ ಇರಿಸಿ ।
ಭಾಷೆ–ದೇಶಗಳ ಗೋಡೆಯ ಬೆಳೆಸಿ, ಆತ್ಮದ ಏಕತೆಯನು ಮರೆ–ಮರೆಸಿ ॥೭॥

ಬಳಲುತಿಹರು ಮಾಯೆಯ ಬಲೆಯೊಳಗೆ, ತೊಳಲಿಹರು ಕರ್ಮ–ಕೋಟಲೆಯೊಳಗೆ ।
ಶಾಂತಿ–ನೆಮ್ಮದಿಯ ಹುಡುಕುತ ಹೊರಗೆ, ಕೊರಗಿ ಮರುಗುವರು ತಮ್ಮೊಳಗೊಳಗೆ ॥೮॥

ಕರ್ಮವ ಕಳೆಯಲು ಹೊಸ–ಹೊಸ ಆಟ, ಪಾಪ–ಪುಣ್ಯಗಳ ತಿಕ್ಕಲಿನಾಟ ।
ತನ್ನನು ತಾನರಿಯದೆ ಜಂಜಾಟ, ಅರಿಯಲು ಇಹವ ತೊರೆವ ಪರದಾಟ ॥೯॥

ಇನ್ನಾದರು ತೊರೆಯಿರಿ ಭೇದಗಳ, ತೊಳೆದು ಶುದ್ಧಿಸಿರಿ ಈ ಹೃದಯಗಳ ।
ತಿಳಿಯಿರಿ ಎಲ್ಲರು ಒಂದೇ ಎಂದು, ಅರಿಯಿರಿ ನೀವೇ ಆತ್ಮರು ಎಂದು ॥೧೦॥

॥ ೧೧ ॥

## ॥ ಬಗೆಬಗೆಯ ಹುಚ್ಚು ॥

ಲೋಕದಲಿ ಎಲ್ಲರಿಗು ಬಗೆಬಗೆಯ ಹುಚ್ಚು ।
ನನ್ನ ಹುಚ್ಚನು ನೋಡಿ ನಗುವವರೆ ಹೆಚ್ಚು ॥

ಕೆಲವರಿಗೆ ಹೆಣ್ಣಿನದು, ಕೆಲವರಿಗೆ ಹೊನ್ನಿನದು,
ಕೆಲವರಿಗೆ ಮಣ್ಣಿನದು, ಏನೇನೊ ಹುಚ್ಚು ।
ನನಗೆ ಒಳಗಣ್ಣನ್ನು ತೆರೆಯಿಸುವ ಹುಚ್ಚು ॥೧॥

ಕೆಲವರಿಗೆ ಟೀಕಿಸುವ, ಕೆಲವರಿಗೆ ದೂಷಿಸುವ,
ಕೆಲವರಿಗೆ ಪರಿಕಿಸುವ, ತರತರದ ಹುಚ್ಚು ।
ಬುದ್ಧಿಯನು ಸಂಸ್ಕರಿಸಲೆಂದೆನಗೆ ಹುಚ್ಚು ॥೨॥

ಭೋಗಿಯಾಗಿಯೆ ಮೆರೆವ, ರೋಗಿಯಾಗಿಯೆ ಸಾಯ್ವ,
ಈ ಮಂದಮತಿಗಳಿಹ ಜಗವೆಲ್ಲ ಹುಚ್ಚು ।
ಯೋಗಿಗಳನಾಗಿಸುವುದದೆ ನನಗೆ ಹೆಚ್ಚು ॥೩॥

॥ ೧೨ ॥

## ॥ ಆಟ – ಪಾಠ ॥

ಸಾಯುವ ತನಕ ಬದುಕುವ ಆಟವು ನನ್ನದು ।
ಸಾಯಿಸಿ ನಂತರ ಹುಟ್ಟಿಸುವಾಟವು ನಿನ್ನದು ॥

ಬದುಕಲಿ ಏನನೊ ಸಾಧಿಸುವಾಟವು ನನ್ನದು ।
ಸಾಧನೆಯೆಲ್ಲವ ನಿಲ್ಲಿಸುವಾಟವು ನಿನ್ನದು ॥೧॥

ಮಾಯೆ–ಮೋಹದಲಿ ಮೆರೆಯುವ ಆಟವು ನನ್ನದು ।
ಮಾಯೆ–ಮೋಹಗಳ ಮರೆಸುವ ಪಾಠವು ನಿನ್ನದು ॥೨॥

ಜನ್ಮ–ಜನ್ಮದಲಿ ಕಲಿಯದ ಪಾಠವು ನನ್ನದು ।
ಪಾಠವನು ಮರಳಿ ಕಲಿಸುವ ಆಟವು ನಿನ್ನದು ॥೩॥

ನಿತ್ಯ–ಸತ್ಯಗಳ ಮರೆಯುವ ಪಾಠವು ನನ್ನದು ।
ಮಿಥ್ಯೆ–ಮರುಳುಗಳ ಭ್ರಮಿಸುವ ಪಾಠವು ನಿನ್ನದು ॥೪॥

ಜೀವನದಲ್ಲಿ ಗಳಿಸುವ ಪಾಠವು ನನ್ನದು ।
ಜೀವನವನ್ನು ಕಳೆಯುವ ಪಾಠವು ನಿನ್ನದು ॥೫॥

॥ ೧೩ ॥

## ॥ ಮೂರ್ಖ ಗುರು – ಮೂಢ ಶಿಷ್ಯ ॥

ನನಗರಿವಿಲ್ಲ, ನಿನಗೂ ಅರಿವಿಲ್ಲ ।
ನಿನಗರಿವಿಲ್ಲ, ನನಗೂ ಅರಿವಿಲ್ಲ ॥

ನಿನಗರಿವಿಲ್ಲ ಎಂಬುವ ಅರಿವು ನನಗಿಹುದಲ್ಲ ।
ನನಗರಿವಿಲ್ಲ ಎಂಬುವ ಅರಿವು ನಿನಗಿರದಲ್ಲ ।
ಅದರಿಂದಾಗಿ ನನ್ನನು ನೀನು ನಂಬುವೆಯಲ್ಲ ॥೧॥

ನನ್ನನು ನಂಬಿ ನೀನು ನನ್ನ ಬಳಿ ಬರುತಿರಬೇಕು ।
ನಿನ್ನನು ನಂಬಿ ನಾನು ಸುಮ್ಮನೆ ಕುಳಿತಿರಬೇಕು ।
ಈ ಮೂಲಕವೇ ನಮ್ಮಿಬ್ಬರಿಗೂ ಜೊತೆಯಿರಬೇಕು ॥೨॥

ಅರಿವಿನ ಮಾತು ಅಂತೆಯೆ ನಾನು ಆಡುವುದಿಲ್ಲ ।
ಅರಿತಂತಿರುವ ನಾಟಕ ಮಾತ್ರ ಮಾಡುವೆನಲ್ಲ ।
ಅದರಿಂದಾಗಿ ನನ್ನ ಹೊಟ್ಟೆಯು ತುಂಬುವುದಲ್ಲ ॥೩॥

ನಿನ್ನನು ನಾನು ನನ್ನ ಬಲೆಯಲ್ಲಿ ಸಿಗಿಸುವುದಿಲ್ಲ ।
ನೀನೇ ಬಂದು ನನ್ನ ಬಲೆಯಲ್ಲಿ ಬೀಳುವೆಯಲ್ಲ ।
ಆದುದರಿಂದ ನನ್ನಲಿ ಯಾವ ದೋಷವು ಇಲ್ಲ ॥೪॥

ನನ್ನನು ನೀನು ವಿಧ–ವಿಧವಾಗಿ ಪ್ರಶ್ನಿಸುತಿರುವೆ ।
ನಿನ್ನನು ನಾನು ಬಹು–ವಿಧವಾಗಿ ಸಿಲುಕಿಸುತಿರುವೆ ।
ಹೀಗೆಯೆ ನಾನು ಆಟ–ಪಾಠಗಳ ನಡೆಯಿಸುತಿರುವೆ ॥೫॥